International Journal of Kannada Research
www.kannadajournal.com

ISSN: 2454–5813
IJKR 2023; 9(4): 01-05
© 2023 IJKR
www.kannadajournal.com
Received: 02-06-2023
Accepted: 04-07-2023

**ಡಾ.ಎಂ.ಬಿ.ಸುರೇಶ**
ಅಸೋಸಿಯೇಟ್ ಪ್ರೊಫೆಸರ್, ಕನ್ನಡ ವಿಭಾಗ, ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಕರ್ನಾಟಕ, ಭಾರತ

**Corresponding Author:**
**ಡಾ.ಎಂ.ಬಿ.ಸುರೇಶ**
ಅಸೋಸಿಯೇಟ್ ಪ್ರೊಫೆಸರ್, ಕನ್ನಡ ವಿಭಾಗ, ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಕರ್ನಾಟಕ, ಭಾರತ

# ಕುವೆಂಪು ಅವರ ಜಲಗಾರ ನಾಟಕದಲ್ಲಿ ಸರ್ವೋದಯ ತತ್ವ

**ಡಾ.ಎಂ.ಬಿ.ಸುರೇಶ**

**DOI:** https://doi.org/10.22271/24545813.2023.v9.i4d.890

**ಪೀಠಿಕೆ**

ಪೌರಾಣಿಕ, ಐತಿಹಾಸಿಕ, ಸಾಮಾಜಿಕ ಮತ್ತು ಮಕ್ಕಳ ರಂಗಭೂಮಿಗಾಗಿ ಕುವೆಂಪುರವರು ಸರಿಸುಮಾರು ಹದಿನಾಲ್ಕು ನಾಟಕಗಳನ್ನು ರಚಿಸಿದ್ದಾರೆ. ಪ್ರತಿ ನಾಟಕದಲ್ಲಿಯೂ ವಿಭಿನ್ನವಾದ ವಸ್ತು ವೈವಿಧ್ಯತೆಗಳನ್ನು ಆಯ್ಕೆ ಮಾಡಿಕೊಂಡಿರುವುದನ್ನು ನಾವು ಗಮನಿಸಿದರೆ ಕನ್ನಡ ರಂಗ ಸಾಹಿತ್ಯದ ಬೆಳವಣಿಗೆಯ ಆಯಾ ಕಾಲಘಟ್ಟವನ್ನು ಪರಿಚಯಿಸಿಕೊಂಡ ಅನುಭವವಾಗುತ್ತದೆ. ತಮ್ಮ ಸೃಜಶೀಲತೆಯ ಅಭಿವ್ಯಕ್ತಿ ಮಾಧ್ಯಮವನ್ನಾಗಿ ರಂಗಭೂಮಿಯನ್ನು ಬಳಸಿಕೊಂಡಿರುವುದು ಮಹಾಕವಿಗಳ ಶ್ರೇಷ್ಠತೆಯನ್ನು ತೋರಿಸುತ್ತದೆ. ಪಾತ್ರ ಪೋಷಣೆ, ಸಂಭಾಷಣೆಯ ತಂತ್ರ, ದೃಶ್ಯಗಳ ಜೋಡಣೆ, ಹಳಗನ್ನಡ/ನಡುಗನ್ನಡ ಶೈಲಿಯ, ಸರಳ ರಗಳೆ ಛಂದಸ್ಸಿನಲ್ಲಿರುವ ಸಂಭಾಷಣೆ ಹಾಗೂ ಹಾಡುಗಳಂತಹ ಸಾಹಿತ್ಯದ ಹಲವಾರು ಪ್ರಕಾರಗಳನ್ನು ಯಶಸ್ವಿಯಾಗಿ ರಂಗದಲ್ಲಿ ಬಳಸಿಕೊಂಡಿರುವುದರೊಂದಿಗೆ ರಂಗಭೂಮಿಯ ಸಾಧ್ಯಾ–ಸಾಧ್ಯತೆಗಳನ್ನು ಆಗಿನ ಸಂದರ್ಭದಲ್ಲಿಯೇ ತಮ್ಮ ಕೃತಿಗಳ ಮೂಲಕ ಹೇಳಿರುವುದರ ಶ್ರೇಯಸ್ಸು ಮಹಾಕವಿಗಳಿಗೆ ಸಲ್ಲುತ್ತದೆ. ಕವಿವರ್ಯರು ಏಕಾಂಕ ನಾಟಕಗಳಿಂದ ಆರಂಭಿಸಿ ಪೂರ್ಣಾಂಕ ನಾಟಕಗಳವರೆಗೂ ಸೃಷ್ಟಿಯಾಗಿರುವ ಅವರ ರಂಗನಾಟಕಗಳಲ್ಲಿ ಮಿಂಚಿನಂತೆ ಮಿನುಗುವುದು ಪೌರಾಣಿಕ ಪ್ರಜ್ಞೆ, ಐತಿಹಾಸಿಕ ಸ್ವೋಪಜ್ಞತೆ ಹಾಗೂ ಸಾಮಾಜಿಕ ತಜ್ಞತೆಯ ಪ್ರಖರ ಅಂಶಗಳು. ಅವರ ನಾಟಕಗಳು ಮುಖ್ಯವಾಗಿ ಪದ್ಯ ನಾಟಕಗಳಾಗಿ ಕಂಡು ಬಂದರೂ ಗದ್ಯ–ಪದ್ಯಗಳು ಕನ್ನಡ ಭಾಷಾಶೈಲಿಗೆ ವಿಶೇಷ ಮೆರುಗನ್ನು ನೀಡಿವೆಯೆಂದರೆ ತಪ್ಪಾಗಲಿಕ್ಕಿಲ್ಲ.

ಸರ್ವೋದಯ, ಸಮಾನತೆ – ಇವನ್ನೆಲ್ಲ ಪ್ರತಿಯೊಂದು ಕೃತಿಯಲ್ಲೂ ಪ್ರತಿಬಿಂಬಿಸುವ ಯತ್ನವನ್ನು ಮಾಡಿದ್ದಾರೆ ಕುವೆಂಪು. ಸಾಮಾಜಿಕ ಬದ್ಧತೆ ಮತ್ತು ಕಾಳಜಿ ಅವರ ಸಾಹಿತ್ಯದ ಸಾರ ಎಂದರೆ ಅತಿಶಯೋಕ್ತಿಯಾಗಲಾರದು. ಬರೆದ ಕವಿತೆಗಳಲ್ಲಿ, ನಾಟಕಗಳಲ್ಲಿ, ಕಾದಂಬರಿಗಳಲ್ಲಿ, ಕೊನೆಗೆ ಶ್ರೀರಾಮಾಯಣ ದರ್ಶನಂ ಮಹಾಕಾವ್ಯದಲ್ಲೂ ಕುವೆಂಪು ಅವರ ಖಂಡತುಂಡ ಪ್ರತಿಪಾದನೆ ಸಮ ಸಮಾಜದ ನಿರ್ಮಾಣ.

ಅಪ್ರಾಸ ಛಂದಸ್ಸಿನ 'ಸರಳರಗಳೆ' ರೂಪದಲ್ಲಿರುವ, ಕೇವಲ ಎರಡು ದೀರ್ಘ ದೃಶ್ಯಗಳಿರುವ ಜಲಗಾರ ಎಂಬ ನಾಟಕ ಮಹಾಕವಿಗಳ ವೈಚಾರಿಕ ಕ್ರಾಂತಿಯ ಚಿಂತನೆಯ ಮೂಸೆಯಲ್ಲಿ ಹದಗೊಂಡು ವಿಶಿಷ್ಟ ದೃಶ್ಯಕಾವ್ಯವಾಗಿ ಹೊರಹೊಮ್ಮಿದೆ. ನಾಟಕ ರಚನೆಯಾದ ದಿನವೇ, ರಚಿಸುವಾಗ ಇದ್ದ ಆವೇಶದಲ್ಲಿಯೇ, ಆಶ್ರಮದಲ್ಲಿ ಸ್ವಾಮೀಜಿ, ನಾ.ಕಸ್ತೂರಿ ಮುಂತಾದವರ ಮುಂದೆ ಓದುತ್ತಾರೆ. ಅದರಲ್ಲಿದ್ದ ಹೊಸ ಆಲೋಚನೆಗಳು, ಹೊಸ ಭಾವಗಳು ಎಲ್ಲರ ಗಮನ ಸೆಳೆಯುತ್ತವೆ. ಹೀಗೆ ಕನ್ನಡದ ಮೊತ್ತಮೊದಲ ಸರಳರಗಳೆಯ ನಾಟಕ ಸಿದ್ಧವಾಗುತ್ತದೆ.

ಈ ರಂಗಕೃತಿಯು ಮಹಾಕವಿಗಳಿಂದ ರಚಿತಗೊಂಡ (1928) ಪ್ರಥಮ ರಂಗಕೃತಿ. ಇದನ್ನು ಅವರು ಎಂ.ಎ. ವಿದ್ಯಾರ್ಥಿಯಾಗಿರುವಾಗಲೇ ಬರೆದುದು. ಈ ಕೃತಿಯ ಮೊದಲು ಮುದ್ರಣವು 1931ರಲ್ಲಿ ಬೆಂಗಳೂರಿನ ರಾಮಮೋಹನ ಕಂಪೆನಿ ಪ್ರಕಾಶನ ಮಾಡಿದಾಗ 'ಮೂರು ನಾಟಕಗಳು' ಸಂಪುಟದಲ್ಲಿ ಪ್ರಕಟಗೊಂಡಿತು. ನಂತರ 1939ರಲ್ಲಿ ಬಿಡಿಯಾಗಿ ಶಿವಮೊಗ್ಗ ಕಾವ್ಯಾಲಯದಿಂದ ಪ್ರಕಟವಾಯಿತು. ಎರಡನೆಯ ಮುದ್ರಣವು 1944, ಆನಂತರ 'ಮೂರು ನಾಟಕಗಳು' ಸಂಪುಟದಲ್ಲಿ ಅನುಕ್ರಮವಾಗಿ 1931, 1942, 1946ರಲ್ಲಿ ಪ್ರಕಟಗೊಂಡಿತು. ಮೈಸೂರಿನ ಉದಯರವಿ ಪ್ರಕಾಶನದಿಂದ ಬಿಡಿಯಾಗಿ 1962, 1963, 1969, 1973, 1984, 1989, 1997, 2002ರಲ್ಲಿ ಪ್ರಕಟಗೊಂಡಿತು. 2004ರಲ್ಲಿ ಶೂದ್ರತಪಸ್ವಿ ನಾಟಕವನ್ನೊಳಗೊಂಡು ಒಂದು ಸಂಪುಟದಲ್ಲಿ ಪ್ರಕಟವಾಗಿದೆ. ಈ ರಂಗಕೃತಿಯು ಎರಡು

ದೃಶ್ಯಾವಳಿಗಳನ್ನೊಳಗೊಂಡಿದೆ. ಮನುಷ್ಯ-ಮನುಷ್ಯರ ನಡುವೆ ಯಾವುದೇ ಬೇಧ-ಭಾವ ಇರಬಾರದು. ಸಂಕುಚಿತ ವಿಚಾರಗಳನ್ನು ಮನಸ್ಸಿನಿಂದ ದೂರ ತಳ್ಳುತ್ತಾ, ಆರೋಗ್ಯಕರ ಸಾಮಾಜಿಕ ಜೀವನದಲ್ಲಿ ಪ್ರಗತಿಪರ ಧೋರಣೆಯನ್ನು ಹೊಂದಿದವರಾಗಬೇಕು. ಜಾತಿ ಮತ್ತು ಉದ್ಯೋಗಾಧಾರಿತ ಶ್ರೇಣೀಕೃತ ವ್ಯವಸ್ಥೆ ನಾಶವಾಗಬೇಕು. ಮೌಢ್ಯತೆಯ ಜಾಡ್ಯವನ್ನು ತೊಡೆದು ಹಾಕಬೇಕು. ಇಲ್ಲಿನ ಕಥಾನಾಯಕ ಜಲಗಾರ ದುಡಿದು ತಿನ್ನುವವ, ದುಡಿಮೆಯಲ್ಲಿ ಭಗವಂತನನ್ನು ಸಾಕ್ಷಾತ್ಕರಿಸಿಕೊಳ್ಳುವ ಪ್ರಯತ್ನಿಶೀಲ ವ್ಯಕ್ತಿತ್ವದವನು.

ನಾಸಿಕ್‌ನಲ್ಲಿರುವ ಕಾಳಾರಾಮ ದೇವಸ್ಥಾನಕ್ಕೆ ಅಸ್ಪೃಶ್ಯರಿಗೆ ಪ್ರವೇಶ ದೊರಕಿಸಿಕೊಡುವ ಮೂಲಕ ಸಾಮಾಜಿಕ- ಧಾರ್ಮಿಕ ಸಮಾನತೆಗಾಗಿ ಆಗ್ರಹಿಸಿ ಭಾರತದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಅವರು 1930 ರಲ್ಲಿ ನಡೆಸಿರುವ ಹೋರಾಟ ಇಂದಿಗೂ ಒಂದು ಮೈಲಿಗಲ್ಲು. ಇದೇ 1930 ರ ಸಮಯದಲ್ಲಿ ಕಾಕತಾಳೀಯ ಎಂಬಂತೆ ಕರ್ನಾಟಕದಲ್ಲಿ ವಿಶ್ವಮಾನವ ಕವಿ ಕುವೆಂಪು ಅವರು ತನ್ನ 24 ನೇ ವಯಸ್ಸಿನಲ್ಲಿ ರಚಿಸಿರುವ "ಜಲಗಾರ" ನಾಟಕದ ಪ್ರಕಟಣೆ. ಕುವೆಂಪು ಅವರು 'ಜಲಗಾರ' ನಾಟಕದಲ್ಲಿ ಶಿವನನ್ನು 'ಜಗದ ಜಲಗಾರ' ಮಾಡುವುದರ ಮೂಲಕ ನಮಗೆ 'ಅಸ್ಪೃಶ್ಯ ಶಿವ'ನ ದರ್ಶನ ಮಾಡಿಸಿದ್ದಾರೆ. ಪುರೋಹಿತಶಾಹಿಯು ಅಸ್ಪೃಶ್ಯತೆ ಆಚರಣೆಯನ್ನು ಧಾರ್ಮಿಕ ಮತ್ತು ಸಾಮಾಜಿಕ ಹಕ್ಕು ನಿಷೇಧಗಳಿಂದ ಊರ್ಜಿತದಲ್ಲಿಟ್ಟಿರುತ್ತದೆ. ಇಂತಹ ಜಾತಿ ಅಹಂಕಾರವನ್ನು ಭಂಜಿಸುವ ಕೆಲಸವನ್ನು ಸಾಮಾಜಿಕ ಚಳವಳಿಗಾರನಾಗಿ ಚಳವಳಿಯ ಮೂಲಕ ಬಾಬಾ ಸಾಹೇಬರೂ ಮತ್ತು ಒಬ್ಬ ಯುವ ಬಂಡುಕೋರ ಕವಿಯಾಗಿ 'ಜಲಗಾರ' ನಾಟಕದ ಮೂಲಕ ಕುವೆಂಪು ಅವರೂ ಮಾಡಿ ತೋರಿಸಿದ್ದಾರೆ. ವಿಶಾಲ ಭಾರತ ರಾಷ್ಟ್ರೀಯ ಮಟ್ಟದಲ್ಲಿ ಅಂಬೇಡ್ಕರ್ ರವರ ಸಾಮಾಜಿಕ ಚಳವಳಿಯ ದಂಗೆ ಹಾಗೂ ವಿಶಾಲ ಮೈಸೂರು ರಾಜ್ಯ ಮಟ್ಟದಲ್ಲಿ ಕುವೆಂಪು ಅವರ ಕ್ರಾಂತಿಕಾರಿ ಸಾಹಿತ್ಯ ದಂಗೆ ಏಕಕಾಲದಲ್ಲಿ ನಡೆದಿರುವುದು ಕಾಕತಾಳೀಯವೂ ವಿಸ್ಮಯಕಾರಕ ಸಂಗತಿಯೂ ಆಗಿದೆ.

"ಕಸ ಗುಡಿಸುವ ಜಲಗಾರನಿಗೆ 'ಪೊರಕೆ ಆರತಿ', ಗುಡಿಸುವುದು ದೇವರ ಪೂಜೆ, 'ನನ್ನ ಶಿವ ಕೊಳೆತ ಕಸದೊಳಿಹನು, ಕಪ್ಪುರದೊಳಗಿಲ್ಲ' ಎಂಬುದು, ಜಲಗಾರನು ತಾನು ಕಂಡುಕೊಂಡ ಶಿವದರ್ಶನ. ಶಿವನು ಜಗದ ಜಲಗಾರನಾಗಿ ಬಂದು "ಬೀದಿಗುಡಿಸುವ ಬಡವನೆದೆಯಲ್ಲಿ ನಾನಿರುವೆ ಉಳುತಿರುವ ಒಕ್ಕಲಿಗನೆದೆಯಲ್ಲಿ ನಾನಿರುವೆ ಎಲ್ಲಿ ಹೊಲೆಯನು ತನ್ನ ಕಾರ್ಯದಲ್ಲಿ ತೊಡಗಿಹನೋ ಅಲ್ಲಿ ನಾನವನ ಪಕ್ಕದೊಳಿರುವೆ. ಕುಂಟರನು ಕುರುಡರನು ದೀನರನು ಅನಾಥರನು ಕೈ ಹಿಡಿದು ಪೊರೆಯುತಿಹನೆಡೆಯಿರುವೆ," ಎಂದು ಹೇಳುವಾಗ ಕುವೆಂಪು ಅವರು, ಶರಣ ಮಾದಾರ ಧೂಳಯ್ಯನು ಅಟ್ಟೆಯ ಚುಚ್ಚುವ ಉಳಿಮೊನೆಯಲ್ಲಿ ಶಿವದರ್ಶನವನ್ನು ಕಂಡು ಕಾಯಕದ ನಡುವೆ ಸುಳಿದು ಅಡ್ಡಿಪಡಿಸಬೇಡವೆಂದು ಜಬರಿಸಿದ ಕಾಯಕಜೀವಿಯ 'ಸಾಮಾಜಿಕ ಅಧ್ಯಾತ್ಮ'ದ ದರ್ಶನಾತ್ಮಕತೆಯನ್ನೇ ಜಲಗಾರನಲ್ಲಿ ತೋರಿಸಿಕೊಟ್ಟಿದ್ದಾರೆ. ಎರಡು ದೃಶ್ಯಗಳಿರುವ ಈ ಚಿಕ್ಕ ನಾಟಕದ ಕಥಾಹಂದರವನ್ನು ಈ ಕೆಳಗಿನಂತೆ ಕುವೆಂಪು ಅವರು ಕಟ್ಟಿಕೊಟ್ಟಿದ್ದಾರೆ.

**ದೃಶ್ಯ- 1**

ಮಹಾಶಿವರಾತ್ರಿಯ ದಿನ ಶರತ್ಕಾಲದ ಸುಂದರ ಮುಂಜಾನೆ. ಭೂದೇವಿಯ ಹಾಡಿನಿಂದ ರಂಗಸ್ಥಳದಲ್ಲಿ ದೃಶ್ಯ ಆರಂಭಗೊಳ್ಳುತ್ತದೆ. ಭೂದೇವಿಯು ತನ್ನ ಚೆಲುವಿನಿಂದ ಮಾಯಮೋಹದ ಜಾಲವ ನೇಯ್ದು ಮುಂಜಾವನ್ನು ವರ್ಣಿಸಿ ಭೂದೇವಿ ಮರೆಯಾಗುವುದರೊಂದಿಗೆ ಜಲಗಾರನ ಪಾತ್ರದ ಪ್ರವೇಶವಾಗುತ್ತದೆ. ಇಲ್ಲಿಯ ಜಲಗಾರ ಈ ಮೊದಲು ಹೇಳಿರುವಂತೆ ನಿಷ್ಕಾಮ, ನಿಷ್ಕಪಟ ಮನಸ್ಸಿನೊಂದಿಗೆ ಕಾಯಕವೇ ಕೈಲಾಸವೆಂದು ತಿಳಿದುಕೊಂಡು ಅದರಂತೆ ಜೀವಿಸುತ್ತಿರುವವನು. ಊರಿನ ಕಾಯಕಯೋಗಿ ಜಲಗಾರನು ಸಂತೋಷವಾಗಿ 'ಮಂಜು ಹರಿಯುವವರೆಗೆ ಕುಳಿತಿಲ್ಲಿ, ನಲಿಯುವೆನು ನಲ್ಲಬ್ಬಗಳ ಹಾಡಿ' ಎಂದು ಹಾಡುತ್ತಿದ್ದಾನೆ. ಮುಂಜಾವಿನ ಸೊಬಗಿಗೆ ಆತನೂ ಮಾರುಹೋಗಿದ್ದಾನೆ. 'ಸೃಷ್ಟಿಕರ್ತನನೆಮಗೆ ಸಾಧಿಸಲು, ತೋರಿಸಲು, ಸೃಷ್ಟಿಯಿದು ಸಾಲದೇ? ..... ಬಿಜ್ಜೆಯೇಂ ತೋರ್ಕುಮೇ ಎದೆಯರಿವು ತೋರದಾ ಪರಮನಂ?' ಎನ್ನಿಸಿಬಿಡುತ್ತದೆ. ಆಗ 'ನೇಗಿಲ ಯೋಗಿಯು ನಾನು; ಮಣ್ಣಿನ ಭೋಗಿಯು ನಾನು!' ಎಂದು ಹಾಡುತ್ತಾ ಒಬ್ಬ ರೈತನ ಆಗಮನವಾಗುತ್ತದೆ. ಆಗ ಜಲಗಾರ 'ಮುಂಜಾನೆಯೊಳಗೆಲ್ಲಿ ಹೋಗುತಿಹೆ, ರೈತ?' ಎನ್ನುತ್ತಾನೆ. ಆಗ ರೈತ,

ಓಹೊ ನೀನರಿಯೆಯಾ? ಇಂದು ನಮ್ಮೂರ
ಶಿವಗುಡಿಯ ಜಾತ್ರೆ! ಬರುವುದಿಲ್ಲವೆ ನೀನು?
ತೇರೆಳೆಯಲೆಂದನಿಬರೂ ಬರುತಿಹರು.

ಎಂದು ಆ ದಿನದ ಮಹತ್ವವನನು ಹೇಳುತ್ತಾನೆ. 'ನನಗೇಕೆ ಶಿವಗುಡಿಯ ಜಾತ್ರೆ? ಜೋಯಿಸರು ದೇಗುಲದ ಬಳಿಗೆನ್ನ ಸೇರಿಸರು' ಎನ್ನುತ್ತಾನೆ ಜಲಗಾರ. ಪಾಪ ರೈತನಿಗೆ ಜಲಗಾರನ ಮಾತುಗಳಲ್ಲಿದ್ದ ನೋವು ಅರ್ಥವಾಗುವುದಿಲ್ಲ. 'ದೂರದಲ್ಲಿಯೇ ನಿಂತು ಕೈಮುಗಿದು ಬಾ.' ಎನ್ನುತ್ತಾನೆ. ಶಿವದರ್ಶನಕ್ಕೆ ದೇವಾಲಯಕ್ಕೆ ಹೋಗುವ ಅವಶ್ಯಕತೆ ಜಲಗಾರನಿಗೆ ಕಾಣುವುದಿಲ್ಲ. ಶಿವನ ಗುಡಿಯಲ್ಲಿರುವವನು ಜೋಯಿಸರ ಶಿವನೆಂದು ತನ್ನ ಮಗನನ್ನು ಹೊರದೂಡಿದಾಗ ತಂದೆಯಾಗಿ ಜಲಗಾರನ ವ್ಯಾಕುಲತೆಯು ಇಮ್ಮಡಿಗೊಳ್ಳುತ್ತದೆ. 'ಶಿವಗುಡಿಯ ಶಿವನು ಜೋಯಿಸರ ಶಿವನಂತೆ; ನನ್ನ ಶಿವನೀ ಮಣ್ಣಿನಲ್ಲಿಹನು. ಕಪ್ಪುರದೊಳಗಿಲ್ಲ, ಮಂಗಳಾರತಿಯೊಳಗಿಲ್ಲ, ಹೂವುಗಳಲ್ಲಿಲ್ಲ; ಕೊಳೆತ ಕಸದೊಳಗಿಹನು ನನ್ನ ಶಿವ'.

ಯಾವೆಡೆಯೊಳಾನಿಹೆನೊ ಅವನಲ್ಲಿಯೇ ಇಹನು.
ನನ್ನೆದೆಯೆ ದೇಗುಲ ; ನನ್ನೊಲ್ಮೆಯದೆ ಪೂಜೆ.
ನಾನೆಲ್ಲಿ ಭಕ್ತಯಿಂ ಕೈಮುಗಿವೆನೋ ಅಲ್ಲಿ
ತನಿಹನು. ನಾನೆಲ್ಲಿ ಸತ್ಕರ್ಮವೆಸಗುವೆನೊ
ಅಲ್ಲಿ ಮೈದೋರುವನು. ಶಿವಗುಡಿಯದೆನಗೇಕೆ?

ಎಂದು 'ಲೋಕ ನಗಬೇಕಾದರೆ ಆರಾದರೂ ಅಳಬೇಕು' ಎನ್ನುವಂತೆ ತಾನು ಮಾಡುತ್ತಿದ್ದ ಕೆಲಸವನ್ನು ಮುಂದುವರೆಸುತ್ತಾನೆ. ರೈತ 'ಪೂಜೆಯೆಂಬುದನರಿಯ; ದೇವನೆಂಬುದನರಿಯ; ಹುಟ್ಟುಗುಣ ಸುಟ್ಟರೂ ಹೋಗುವುದೆ?' ಎಂದು ತಾನು ತಂದಿದ್ದ ಹೂವು ಹಣ್ಣುಗಳೊಂದಿಗೆ ಶಿವಾಲಯದೆಡೆಗೆ ಹೊರಡುತ್ತಾನೆ. 'ತಿರೆಗಿಂತ ದೇಗುಲವದೊಳದೇನ್?' ಎಂದು ಜಲಗಾರ ಹಾಡುತ್ತಾನೆ.

ಇಬ್ಬರು ಪಾರ್ವರ ಪ್ರವೇಶವಾಗುತ್ತದೆ. ದೂರದಿಂದ ಹಾಡು ಕೇಳಿದ ಅವರಲ್ಲೊಬ್ಬ

ಕೊಳಲಿನಿದನಿಯಂತೆ ಸವಿಗೊರಲಿನಿಂದೊಗೆದ
ಗಾಯನವದೆನಿತಿಂಪು! ಹಾಡಿದವರಾರೊ? ಎನ್ನುತ್ತಾನೆ.
ಎರಡನೆಯವನು- ಯಾರೋ ದಿವ್ಯಾತ್ಮನಿರಬೇಕು. ಮಧುರತಮ

ಗಾಯನವು ಅಮಲತಮ ಹೃದಯದಿಂದಲ್ಲದೆ
ಹೊರಹೊಮ್ಮಲರಿಯದು! ಗುಡಿಯ ಬಳಿಯಾದರೂ ಹಾಡಿದನೆ!
ಎನ್ನುತ್ತಾನೆ.

ಜಲಗಾರನನ್ನು ನೋಡಿ ಹಾಡಿದವನು ಅವನೇ ಎಂದು ತಿಳಿಯುತ್ತಿದ್ದ ಹಾಗೆ ಅವರ ವರ್ತನೆಯೇ ಬದಲಾಗಿಬಿಡುತ್ತದೆ.

ಶೂದ್ರರೊಳ್ ಕವಿವರ್ಯರುದಿಸುವರೆ? ಹುಟ್ಟುವರೆ ಪಂಡಿತರ್?
ಜನಿಸುವರೆ ಶಿಲ್ಪಿಗಳ್? ಗಾಯಕರ್? ಯೋಗಿಗಳ್?
ಅಸದಳಂ! ಹೊತ್ತಾಯ್ತು ಹೋಗೋಣ

ಎಂದು ಹೊರಡುತ್ತಾರೆ. ಶ್ರೇಷ್ಠತೆಯನ್ನು ಗುರುತಿಸುವಲ್ಲಿ ಸಫಲರಾದರೂ, ಸಾಮಾಜಿಕ ಕಾರಣದಿಂದ ಅದನ್ನು ಸ್ವೀಕರಿಸುವ ಮನೋಭಾವ ಅವರಿಗಿರುವುದಿಲ್ಲ. ಮಹಾಕವಿಗಳ ಪ್ರತಿಭೆಯು ವ್ಯಕ್ತಿ ಮತ್ತು ಜಾತಿಯಿಂದ ಬರುವುದೆಂಬ ಕಾಲೆಳೆವ ಕುತ್ಸಿಕ ಬುದ್ಧಿಯ ವಿಚಾರವನ್ನು ನಿರಾಕರಿಸುತ್ತಾರೆ. ಇದು ಜಾತಿ ವ್ಯವಸ್ಥೆಯಲ್ಲಿ ಆದಿಕಾಲದಿಂದಲೂ ಬೇರು ಬಿಟ್ಟಿರುವ ತಳಬುಡವಿಲ್ಲದ ನಂಬಿಕೆ. ದೇವರು, ವಿದ್ಯೆ ಕೇವಲ ಕೆಲವರ ಸ್ವತ್ತು ಮತ್ತು ಹಕ್ಕು ಎಂಬುದನ್ನು ಇಲ್ಲಿ ಕಿತ್ತೊಗೆದಿದ್ದಾರೆ. ಪ್ರತಿಭೆಯನ್ನು ಹತ್ತಿಕ್ಕುವ ಪ್ರಯತ್ನವು ಮನುಷ್ಯ ಕುಲಕ್ಕೆ ಕಂಠಕಪ್ರಾಯವೆಂದು ನೇರವಾಗಿ ಇಲ್ಲಿ ಹೇಳಿದ್ದಾರೆ.
ಮುಂದೆ ಒಬ್ಬ ಯುವಕ ಬಂದು ಜಲಗಾರನಿಗೆ 'ಒಂದು ದಿನವಾದರೂ ವಿಶ್ರಾಂತಿಯಿರಲಿ; ಬಾ, ಹೋಗೋಣ' ಎನ್ನುತ್ತಾನೆ. ಆದರೆ ಜಲಗಾರ 'ನೀನು ಶಿವನ ಗುಡಿಯೊಳಗರಸು; ನಾನು ಪುಡಿಯೊಳಗರಸುವೆನು' ಎಂದು ಬೀಳ್ಕೊಡುತ್ತಾನೆ. 'ತ್ವಮೇವ ಮಾತಾ ಚ ಪಿತಾ ತ್ವಮೇವ!' ಎಂದು ಮಂತ್ರ ಹೇಳುತ್ತ ಬರುವ ಭಟ್ಟನೊಬ್ಬ, 'ಕಣ್ಣಿಲ್ಲ, ಧರ್ಮರೇ, ಕಾಸು ಕೊಡಿರಪ್ಪಾ!' ಎನ್ನುತ್ತಾ ಬರುವ ತಿರುಕನಿಗೆ 'ನೀ ಸತ್ತರೆನಗೇನೊ? ಮಡಿಬಟ್ಟೆ ಮುಟ್ಟುವೆಯಾ? ಅದಕೆ ದೇವರು ನಿನ್ನ ಕಣ್ಣಿಂಗಿಸಿದ್ದು' ಎಂದು ಹೇಳುತ್ತಾ ಸಾಗಿ ಹೋಗುತ್ತಾನೆ.
ನಂತರ ವಿಚಾರವಾದಿಗಳಂತೆ ಕಾಣುವ ಇಬ್ಬರು ತರುಣರ ಪ್ರವೇಶವಾಗುತ್ತದೆ. 'ಜಗವೆಲ್ಲ ದೇವನಿಹ ಗುಡಿಯಲ್ಲವೇ, ಗೆಳೆಯ?' ಎನ್ನುವ ವಿಚಾರಧಾರೆ ಹರಿಬಿಡುತ್ತಾ ಬರುವ ಅವರ ಬಳಿ ತಿರುಕ ಭಿಕ್ಷೆ ಬೇಡಿದಾಗ ಕೊಡುವಂತೆ ನಟಿಸಿ, ಕೊಡದೆ ಆತನನ್ನು ಗೋಳು ಹುಯ್ದುಕೊಳ್ಳುತ್ತಾರೆ. 'ಭಿಕ್ಷುಕರ ದೆಸೆಯಿಂದ ದೇಶವೇ ಹಾಳಾಯ್ತು! ಲೋ! ನಿನ್ನ ಕಣ್ಣು ಕುರುಡೇನೊ, ಠಕ್ಕ!' ಎಂದು ಆತನನ್ನು ಹಿಂಸಿಸುತ್ತಾರೆ. ಜಲಗಾರ ಬಂದು ತಿರುಕನನ್ನು ಬಿಡಿಸಿಕೊಳ್ಳುತ್ತಾನೆ. ಆ ಯುವ ವಿಚಾರವಾದಿಗಳ ವಿಚಾರ ಕೇವಲ ಪುಸ್ತಕದ ಬದನೆಯಾಗುತ್ತದೆ.!

ಎದ್ದೇಳು ಭಿಕ್ಷುಕನೆ, ನನ್ನನ್ನದೊಳೆ, ಮುಷ್ಟಿ
ನಿನಗಿಕ್ಕಿ, ಶಿವಪೂಜೆ ಮಾಡುವೆನು. ನೀನೆನ್ನ
ಸೋದರ, ನೀನೆನ್ನ ದೇಗುಲ!...........

ಆಧುನಿಕ ಪ್ರಗತಿಪರ ವಿಚಾರವಾದಿಗಳಂತೆ ಮಾತನ್ನಾಡುವವರು ಜಾತ್ರೆಯಲ್ಲಿ ದೇವಸ್ಥಾನದ ಮುಂದುಗಡೆಯಿರುವ ಭಿಕ್ಷುಕನಿಗೆ ಬಿಡಿಗಾಸನ್ನೂ ಭಿಕ್ಷೆ ನೀಡದೇ, ಭಿಕ್ಷುಕನು ಕಂಡರೂ ಕಾಣದಂತೆ ಮುನ್ನಡೆಯುತ್ತಾರೆ. ತನ್ನಲ್ಲಿರುವುದನ್ನೇ ಉದಾರವಾಗಿ ಹಂಚಿಕೊಂಡು ಜೀವಿಸುವ ಜಲಗಾರ ಮಾನವೀಯತೆ, ಅಂತಕರಣವೇ ನಿಜಭಕ್ತಿ ಎಂಬ ತತ್ವಗಳಿಗೆ ಪ್ರತೀಕವಾಗುತ್ತಾನೆ.

**ದೃಶ್ಯ– 2**

ಎರಡನೆಯ ದೃಶ್ಯದಲ್ಲಿ ಜಲಗಾರ ತನ್ನ ಸಂಜೆಯ ಕೆಲಸವನ್ನು ಮಾಡುತ್ತಿರುತ್ತಾನೆ. ಜಾತ್ರೆಗೆ ಹೋದವರೆಲ್ಲಾ ಹಿಂತಿರುಗುತ್ತಿರುತ್ತಾರೆ. ಜಾತ್ರೆಯ ವೈಭವ, ಆಡಂಬರದ್ದೇ ಮಾತು! 'ಜಲಗಾರ ಪುಣ್ಯವಿಲ್ಲವೊ ನಿನಗೆ!' ಎನ್ನುತ್ತಾನೆ ರೈತ. 'ಶಿವಗುಡಿಯಿಂದ ಏನು ತಂದೆ' ಎಂಬ ಜಲಗಾರನ ಮಾತಿಗೆ 'ಹಣ್ಣು ಕಾಯಿ ಹೂವು ಕರ್ಪೂರ ಕುಂಕುಮ' ಎನ್ನುತ್ತಾನೆ; ದೇವಾಲಯದ ಕಲಾವೈಭವವನ್ನು ವರ್ಣಿಸುತ್ತಾನೆ! ತನ್ನ ಬದುಕಿನ ಕಷ್ಟವನ್ನು ಹಾಡುತ್ತಾ ಹುಡುಗಿಯೊಬ್ಬಳು ಹೋಗುತ್ತಾಳೆ. ಪಾರ್ವರಿಬ್ಬರು ಬರುತ್ತಾರೆ. ಅಂದಿನ ಅವರ ದಕ್ಷಿಣೆ, ಹಣ್ಣುಕಾಯಿನ ದುಡ್ಡು, ತೀರ್ಥ ಮಾರಿದ ದುಡ್ಡುಗಳ ಬಾರಿ ಲೆಕ್ಕಾಚಾರದಲ್ಲಿ ಅವರಿಬ್ಬರೂ ಮುಳುಗಿರುತ್ತಾರೆ. 'ಅಂತೂ ನಮಗೆಲ್ಲ ಶಿವಗುಡಿಯ ದೆಸೆಯಿಂದ ಹಿಟ್ಟು ಹೊಟ್ಟೆಗೆ, ದುಡ್ಡು ಬಟ್ಟೆಗೆ' ಎಂದು ಒಬ್ಬ; 'ಗುಟ್ಟು ಬಿಟ್ಟರೆ ಕೆಟ್ಟೆ. ನಡೆ ಬೇಗ' ಎಂದು ಇನ್ನೊಬ್ಬ ಹೇಳುತ್ತಾ ಹೋಗುತ್ತಾರೆ. ಇವರ ಮಾತು ಕೇಳಿದ ಜಲಗಾರ 'ಜೋಯಿಸರು ಗುಡಿಯ ನುಗ್ಗುವ ಮುನ್ನವೇ ಶಿವನ ಹೊರಗಟ್ಟಿ ನುಗ್ಗುವರು' ಎಂದು ಪ್ರಶ್ನಿಸಿಕೊಳ್ಳುತ್ತಾನೆ. ಕವಿಯೊಬ್ಬ ತನಗೂ ಇದಕ್ಕೂ ಏನೂ ಸಂಬಂಧವಿಲ್ಲವೆನ್ನುವಂತೆ 'ಕೊರಗಲೇಕೆ? ಮರುಗಲೇಕೆ? ಬರಿದೆ ಬಾಳನು ಜರೆವುದೇಕೆ? ಎಂದು ಹಾಡುತ್ತಾನೆ. ಹುಡುಗರ ಗುಂಪೊಂದು 'ನಾವು ಮರುಳರು, ನಾವು ಕುಡುಕರು, ಮರುಳುತನವೆಮ್ಮಾಟವು' ಎಂದು ಹಾಡುತ್ತಾ ಸಾಗುತ್ತದೆ! ಇವೆಲ್ಲವನ್ನೂ ಕಂಡ, ಕೆಲಸ ಮುಗಿಸಿದ ಜಲಗಾರ 'ಕುಳಿತಿಲ್ಲಿ ಶಿವನಂ ಧ್ಯಾನಿಸುವೆ' ಎಂದು ಮಧುರವಾಗಿ ಹಾಡತೊಡಗುತ್ತಾನೆ. ಜಲಗಾರನ ವೇಷದಲ್ಲಿ ಶಿವ ಪ್ರತ್ಯಕ್ಷನಾಗುತ್ತಾನೆ. ಆಗ ಜಲಗಾರ–

ನೀನಾರು ಆಕೃತಿಯೆ! ನೀನಾರು? ಯಾರು?
ಮಾನುಷವಾಗಿ ಕಂಡರೂ ಅಮಾನುಷವಾಗಿ
ತೋರುತಿಹೆ!
ಎಂದು ಹೆದರುತ್ತಲೇ ಕೇಳುತ್ತಾನೆ.
ಆಗ ಶಿವ– ನಾನೊಬ್ಬ ಜಲಗಾರ.
ಅಂಜದಿರು, ಸೋದರನೆ! ಜಗದ ಜಲಗಾರ
.......................................................
ರುದ್ರನೆಂಬರು ಎನ್ನ; ಶಿವನೆಂಬರೆನ್ನ;
ಹೇಸುವರು, ಅಂಜುವರು, ಜಲಗಾರನೆನಲು!
ಆಗ ಜಲಗಾರ ಮುಗ್ಧವಾಗಿ,
ತಿಳಿದವರು, ಪಂಡಿತರು,
ಬೇರೊಂದು ರೀತಿಯಲ್ಲಿ ಬಣ್ಣಿಸಿರುವರು ನಿನ್ನ

ಎಂದು ಕೇಳುತ್ತಾನೆ. ಆಗ ಶಿವ, 'ನಾನು ಶಾಸ್ತ್ರಿಗಳ ಶಿವನಲ್ಲ, ಕಾವ್ಯಗಳ ಶಿವನಲ್ಲ, ಬೆಳ್ಳಿಬೆಟ್ಟದ ಮೇಲೆ ಗಿರಿಜೆಯೊಡಗೂಡಿ ಸರಸವಾಡುವ ರಸಿಕ ಶಿವನಲ್ಲ! ಬ್ರಹ್ಮಾಂಡ ಒತ್ತುತಿಹ ಕಸದ ರಾಸಿಯ ಮೇಲೆ ಹತ್ತಿ, ನಿಂತು ನರ್ತನವೆಸಗುತಿಹ ತೋಟಿ ನಾನು! ನಿಜಶಿವನು ಜಲಗಾರ! ನಿನ್ನ ಮುಂದಿಹನು, ನೋಡು' ಎನ್ನುತ್ತಾನೆ. ಆದರೂ, 'ಪಂಡಿತರದೇಕಂತು ಬಣ್ಣಿಪರು ನಿನ್ನ?' ಎಂಬ ಜಲಗಾರನ ಪ್ರಶ್ನೆಗೆ, ಶಾಸ್ತ್ರಿಗಳ ಕಂಗಳಿಗೆ ನಾನು ನೋಡಲು ಕುರೂಪಿಯಾಗಿದರಿಂದ ತಣ್ಣಗಿರನೊಡವೆ ಮಾಡಿದರು. ಅವರ ಭಾಗಕೆ ನಾನು ಪಾಪಿಯಾಗಿದ್ದರಿಂದ ಗಂಗೆಯನ್ನು ತಲೆಯಲ್ಲಿಟ್ಟು ಶುದ್ಧ ಮಾಡಿದರು! ಅಸ್ಪಶ್ಯನಾಗಿದ್ದರಿಂದ ಹಣೆಗಣ್ಣಿನ ಬೆಂಕಿಯಿಂದ ಸುಟ್ಟರು. ರೌದ್ರವಾಗಿ ನಾನು ಕಾಣಬೇಕೆಂದು ಹಾವುಗಳ ಸುತ್ತಿದರು ಎಂದೆಲ್ಲಾ ಹೇಳಿ,

ಊರ ತೋಟಿಯು ನೀನು; ಜಗದ ತೋಟಿಯು ನಾನು!
ಬಾ ಎನ್ನ ಸೋದರನೆ. ನೀನೆನ್ನ ನಿಜಭಕ್ತ!
ನಿನ್ನದೇ ಶಿವಭಕ್ತಿ! ನೀನೇ ಶಿವಭಕ್ತ!
ನೀನೆ ನಾನಾಗಿಹೆನು! ನಾನೆ ನೀನಾಗಿರುವೆ!

ಶಿವ ನೀನು! ಶಿವ ನೀನು!

ಎಂದು ಜಲಗಾರ ರೂಪಿಯಾದ ಶಿವ ಹಾಡುತ್ತಾನೆ. ಆಗ ಭಾವಪರವಶನಾದ ಜಲಗಾರ 'ಶಿವ ನಾನು! ಶಿವ ನಾನು!' ಎಂದು ಹೇಳುತ್ತಾ ಶಿವನ ತೆಕ್ಕೆಯೊಳಗಾಗುತ್ತಾನೆ. ನಾಟಕ ಮುಗಿಯುತ್ತದೆ. ಭಾರತೀಯರಿಗೆ ಬೇಕಾಗಿರುವುದು ಜಾತಿ, ಮತ, ಪಂಥಗಳಿಂದ ಕಡಿವಾಣ ಹಾಕುವ ಸನಾತನ ಸಂಸ್ಕೃತಿಯಲ್ಲ. ಬದಲಾಗಿ ಜಲಗಾರನಂತೆ ಪೊರಕೆ ಹಿಡಿದು ಊರನ್ನೇ ಸ್ವಚ್ಛಗೊಳಿಸುವ ತನು-ಮನ ಪರಿಶುದ್ಧಗೊಳಿಸುವ ಜಲಗಾರ. ಜಾತ್ಯತೀತ ಜಲಗಾರ. ಸತ್ಕರ್ಮಿ ಜಲಗಾರನೆಂಬ ಕುವೆಂಪು ದೃಷ್ಟಿಕೋನದಲ್ಲಿ ಶೂದ್ರಪರ ಸಂವೇದನೆಗಳಿವೆ. ಒಟ್ಟಾರೆಯಾಗಿ ಕುವೆಂಪು ಅವರ ಜಲಗಾರ ನಾಟಕದಲ್ಲಿ ಈ ಕೆಳಗಿನ ಆಶಯಗಳನ್ನು ಗುರುತಿಸಬಹುದು.

- **ಮಾನವೀಯತೆ, ಅಂತಃಕರಣದ ಅನಾವರಣ:**

ಬಡತನಕ್ಕೆ ಜಾತಿ ಬೇಧವಿಲ್ಲ. ಆದರೆ ಮೇಲ್ಜಾತಿಯೆಂಬ ಆಯುಧ ಹಿಡಿದು ಜಾತಿಯ ಹೆಸರಿನಲ್ಲಿ ದೂರ ಇಡಲ್ಪಟ್ಟ ಶೋಷಿತ ವರ್ಗವು ಡೊಂಗಿ ಜನರ ವರ್ತನೆಗೆ ಈಡಾದುದು ಪರಮಸತ್ಯ. ಶೋಷಿತ ದೀನರಲ್ಲಿಯೇ ಪ್ರೀತಿ-ಪ್ರೇಮ-ಮಮತೆ-ವಾತ್ಸಲ್ಯ-ಅನುಕಂಪ ಮನೆ ಮಾಡಿರುತ್ತದೆ. ಅವರು ಅವುಗಳನ್ನೇ ದೇವರೆಂದು ಅನುದಿನವೂ ಪೂಜಿಸುತ್ತಾರೆ. ದೇವರು ಗುಡಿ-ಗುಂಡಾರಗಳಲ್ಲಿಲ್ಲ, ಭಕ್ತಿ-ನಿಷ್ಠೆ-ಪ್ರಾಮಾಣಿಕತೆಯಿಂದ ಮಾಡುವ ಯಾವುದೇ ಕೆಲಸವು ಕೀಳಲ್ಲ. ಇದೇ ಪಾರಮಾರ್ಥಿಕ ಹಾಗೂ ಸಾಮಾಜಿಕ ತತ್ವ, ಜಾತ್ರೆಯಲ್ಲಿ ತಿನ್ನುವ ಅನ್ನಕ್ಕೋಸ್ಕರ ಭಿಕ್ಷೆ ಬೇಡುತ್ತಿರುವ ಕುರುಡ-ಕುಂಟ-ತಿರುಕರಿಗೆ ತಾನು ತಿನ್ನುವ ಅನ್ನದಲ್ಲಿ ಒಂದು ಮುಷ್ಟಿಯನ್ನು ನೀಡಿ ಮಾನವೀಯತೆಯನ್ನು ಮೆರೆದು ಆನಂಧಿಸುವುದೇ ನಿಜವಾದ ಶಿವಪೂಜೆಯೆಂದು ತಿಳಿದು ಬುತ್ತದೆ. ಧನ್ಯತಾಭಾವ ಮೂಡುತ್ತದೆ.

- **ಪುರೋಹಿತಶಾಹಿಯ ನಿರಾಕರಣೆ**

ಭಾರತೀಯ ಮತ-ಧರ್ಮಗಳಲ್ಲಿನ ಅಸ್ಪೃಶ್ಯತೆಯೆಂಬ ಕೊಳಕು ನಿವಾರಣೆ, ಮೇಲು-ಕೀಳೆಂಬ ಬೇಧ-ಭಾವಗಳ ನಿರಾಕರಣೆ, ಸಾಮಾಜಿಕ ಮನೋವಿಕಾಸ ಮತ್ತು ಮಾನವೀಯ ಮೌಲ್ಯಗಳ ಪ್ರತಿಪಾದನೆ ಮುಂತಾದ ಅಂಶಗಳು ಈ 'ಜಲಗಾರ' ಕೃತಿಯಲ್ಲಿ ಮಹಾಕವಿಗಳು ಅಳವಡಿಸಿ ಯಶಸ್ವಿಯಾಗಿದ್ದಾರೆ. ಮಹಾಕವಿಗಳು ಇಲ್ಲಿ ಓರ್ವ ಆಧ್ಯಾತ್ಮಿಕ ಸಂತರಂತೆ ಸನಾತನ ಹಿಂದೂ ಪರಂಪರೆ ಮತ್ತು ಭಗವಂತನ ಅಸ್ತಿತ್ವವನ್ನು ಒಪ್ಪಿಕೊಂಡು ಪರಮಾತ್ಮನ ಆಶ್ರಯದಲ್ಲಿ ಸದಾಶಯಗಳನ್ನು ಪೂರೈಸಿಕೊಳ್ಳಬೇಕೆಂದು ಬಯಸಿದವರು. ಅವರು ಪುರೋಹಿತಶಾಹಿ ಮತ್ತು ಪುರೋಹಿತಗಿರಿಯನ್ನು ಯಾವಾಗಲೂ ನಿರಾಕರಿಸುತ್ತಿದ್ದರು. ವ್ಯಕ್ತಿಯೊರ್ವ ತಾನು ಮಾಡುವ ಕಾರ್ಯ-ಕೆಲಸಗಳಿಂದ ಗೌರವ ಲಭಿಸುತ್ತದೆಂಬುದನ್ನು ಈ ಮೂಲಕ ಸಾರಿದ್ದಾರೆ. ಆಚಾರ-ವಿಚಾರಗಳಿಗೆ ನಿಕಟ ಸಂಬಂಧವೇರ್ಪಟ್ಟು ಎಲ್ಲರೂ ಒಂದೇ ಎಂಬ ಭಾವನೆ ಬಲವಾಗಬೇಕೆಂದು ಬಯಸಿದವರು. ಜೀವವಿರೋಧಿ ಧೊರಣೆಗಳು, ದಮನಕ್ಕೊಳಗಾದವರು ನ್ಯಾಯಕ್ಕಾಗಿ ಪ್ರಭುತ್ವವನ್ನು ಪ್ರಶ್ನಿಸಲು ಅನುವಾಗುವಂತೆ ಶಕ್ತರಾಗಿರಬೇಕೆಂದು ಹೇಳುತ್ತಲೇ ಪುರೋಹಿತಶಾಹಿಯು ಶೂದ್ರಶಕ್ತಿಯ ಮುಂದೆ ಪದರುಗುಟ್ಟುವಂತೆ ಮಾಡಿದವರು. ಮೌಢ್ಯವನ್ನು ತೊರೆದು ಬಲಾಢ್ಯರಾಗಿರಬೇಕೆಂದು ಕರೆ ಕೊಟ್ಟವರು. ಈ ರಂಗಕೃತಿಯಲ್ಲಿ ಮಹಾಕವಿಗಳ ವೈಚಾರಿಕತೆ ಹಾಗೂ ಆಧ್ಯಾತ್ಮ ಚಿಂತನೆಗಳು ಮೈಳೈಸಿವೆ.

- **ಕಾಯಕ ಸಿದ್ಧಾಂತ**

ಶಿವಪೂಜೆಗೆಂದು ಹೊರಟಿರುವ ಕರ್ಮಯೋಗಿ, ನೇಗಿಲಯೋಗಿ ರೈತನನ್ನು ಜಲಗಾರನು ಮಾತನಾಡಿಸುತ್ತಾ ಹೇಳುತ್ತಾನೆ. 'ಕರ್ಮಾರಾಧನೆ, ಸೇವೆಯೇ ಪೂಜೆ' ಎಂದು ಹೇಳುವುದರೊಂದಿಗೆ ನಂತರದಲ್ಲಿ ಬರುವ ವಿಚಾರವಾದಿ ತರುಣನನ್ನು ನೋಡಿ 'ಒಂದು ದಿನದ ಜಾತ್ರೆ, ಅದಕ್ಕಾಗಿ ಯುಗ-ಯುಗದ ಯಾತ್ರೆ' ಎಂದು ಉದ್ಗರಿಸುತ್ತಾನೆ. ಕಸ ಗುಡಿಸುವ ಜಲಗಾರ ಮತ್ತು ನೇಗಿಲಯೋಗಿ ರೈತ ಇಬ್ಬರೂ ಶ್ರಮಜೀವಿಗಳು ಮತ್ತು ಕಾಯಕವನ್ನು ಬಹಳ ಪ್ರೀತಿಯಿಂದ ಅಪ್ಪಿಕೊಂಡವರು. ಇವರಿಬ್ಬರ ವಿಚಾರದಲ್ಲಿ ದುಡಿಮೆಯ ಹಿರಿಮೆಯನ್ನು ಕಾಣಬಹುದು. ಜಲಗಾರ ಶಿವಭಕ್ತ, ಮೋಕ್ಷ ಪಥವನ್ನು ಬಯಸದವನು. ಆತ ಬದುಕಿನ ದೀಕ್ಷೆಯನ್ನರಸುವ ವಾಸ್ತವವಾದಿ. ಪ್ರಕೃತಿಯೇ ದೈವಕಲ್ಪ ; ಜೈನ-ಬೌದ್ಧಧರ್ಮಗಳ ಕರ್ಮಸಿದ್ಧಾಮತದ ಪ್ರತಿಪಾದನೆಯು ಇಲ್ಲಿ ಮಹಾಕವಿಗಳ ಲೇಖನಿಯಲ್ಲಿ ವ್ಯಕ್ತಗೊಂಡಿದೆ.

ಇಲ್ಲಿಯ ಜಲಗಾರನು ತನ್ನ ಕಾಯಕದ ಸಿದ್ಧಿ-ಸಾಧನೆಯಲ್ಲಿ ತೊಡಗಿಸಿಕೊಂಡು ಮನುಕುಲದ ತೀಕ್ಷ್ಣತೆಗಳನ್ನು ಅರಿಯಲು ಹಾತೊರೆಯುವವನು. ಜಗದ ಜಲಗಾರನ ದರ್ಶನ ಮಾತ್ರದಿಂದ ಪುನೀತನಾದ ಶಿವನು ಜಲಗಾರನ ಭಕ್ತಿ ಪರಾಕಾಷ್ಠೆಯನ್ನು ಈ ಸಾಮಾಜಿಕ ಗೀತರೂಪಕದ ಪ್ರಕಾರದಲ್ಲಿ ಸಾಕ್ಷಾತ್ಕರಿಸಲಾಗಿದೆ. ಜಗದ ಕೊಳೆಯನ್ನು ತೊಳೆಯಲು ತಾನಿಡಿದಿರುವ ಪೊರಕೆಯು ಹರಕೆಯನ್ನು ಪೊರೆದು ಸದ್ಗತಿ ಕಾಣಬೇಕೆಂಬುದು ಜಲಗಾರನ ಮನದಾಳದ ಇಚ್ಛೆ.

ಈ ಕೃತಿಯಲ್ಲಿ ಶಿವನಗುಡಿಯು ಕೇಂದ್ರಸ್ಥಾನ. ಇಲ್ಲಿಯ ಹಾರುವರು, ತರುಣರು, ಮತ್ತು ಜಲಗಾರ ಪಾತ್ರಗಳು ಮಹಾಕವಿಗಳ ಕಲ್ಪನೆಯ ಮೂಸೆಯಲ್ಲಿ ಅರಳಿದ ನೈಜ ಸೃಷ್ಟಿ. ದೃಶ್ಯಾವಳಿಗಳ ಸಂಯೋಜನೆಯು ಸರಳವಾಗಿ ಮನಸೆಳೆಯುತ್ತದೆ. ಮೊದಲ ಮತ್ತು ಕೊನೆಯ ದೃಶ್ಯಗಳಲ್ಲಿ ಭಕ್ತಾದಿಗಳು ಶಿವನ ಗುಡಿಗೆ ಹೋಗಿ, ಹಿಂದಿರುಗುವ ರಂಗಕ್ರಿಯೆಯಿದೆ

ನಾಟಕದಲ್ಲಿ ಸಾಮಾಜಿಕ ಮತ್ತು ಪಾರಮಾರ್ಥಿಕ ಚಿಂತನೆಯ ವಿಚಾರಗಳು ಸದಿಚ್ಛೆಯ ಪ್ರತೀಕ ಮತ್ತು ಆತ್ಮನಿವೇಧನೆಯ ಪ್ರತಿರೂಪವಾಗಿ ಹೊರಹೊಮ್ಮಿವೆ. ಕರ್ಮಯೋಗಿ ಜಲಗಾರನ ಕಾಯಕದ ಮಹತ್ವದೊಂದಿಗೆ ಸಾಮಾಜಿಕ ಪಿಡುಗಾಗಿರುವ ಅಸ್ಪೃಶ್ಯತೆಯನ್ನು ಧಿಕ್ಕರಿಸುವ ಮತ್ತು ಅದರ ವಿರುದ್ಧ ಬಂಡೇಳುವ ಹೃದಯಸ್ಪರ್ಶಿ ಕಲಾತ್ಮಕ ಕೃತಿಯಾಗಿ ರೂಪಿತಗೊಂಡಿದೆ. ಜಗದ ಜಲಗಾರನ ಮನೋಧರ್ಮದ ಮರ್ಮ ಸವಿಸ್ತಾರವಾದುದು ; ಸಾಹಿತ್ಯ ಚಿಂತನೆಗೆ ನಿಲುಕುವಂತದು. ಸಾಮಾಜಿಕ ವಸ್ತು, ಧಾರ್ಮಿಕ ವಿಡಂಭನೆಯನ್ನು ಅಲೌಕಿಕ ಮಟ್ಟಕ್ಕೆರಿಸುವ ಚತುರತೆ ಇಲ್ಲಿದೆ. ಸಾಮಾಜಿಕ ಮತ್ತು ಧಾರ್ಮಿಕ ವಿಷಮತೆಯ ವಿಢಂಬನೆ, ಇಲ್ಲಿ ಕೇವಲ ವಿಢಂಬನೆಯಾಗಿ ಉಳಿಯದೆ, ಇಡೀ ರಂಗಕೃತಿಯ ನಿರ್ಮಾಣವು ಆಧ್ಯಾತ್ಮಿಕ ತಳಹದಿಯ ಮೇಲೆ ನಿಂರಿತುವುದನ್ನು ನಾವು ಕಾಣಬಹುದು. ತನ್ನತನವನಳಿದ ಸಾರ್ಥಕ ಜೀವನದ ಉನ್ನತ ಗತಿಯನ್ನು ಉಜ್ವಲವಾಗಿ ಚಿತ್ರಿಸಿರುವ ಈ ಕೃತಿಯು ಏಕಾಂಕ ಮಾದರಿಯ ಸಮಕಾಲೀನ ಸಂದರ್ಭದಲ್ಲಿಯೂ ತನ್ನ ತಾಜಾತನದ ಕಥಾವಸ್ತುವನ್ನು ಹೊಂದಿರುವ ರಂಗಕೃತಿಯಾಗಿದೆ.

**ಪರಾಮರ್ಶನ**

1. ಜಲಗಾರ ನಾಟಕ, ಕುವೆಂಪು, ಉದಯರವಿ ಪ್ರಕಾಶನ -2015
2. ಕುವೆಂಪು ಸಮಗ್ರ ನಾಟಕಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ-2004

3. ಕುವೆಂಪು ಸಮಗ್ರ ಸಾಹಿತ್ಯ ಸಂಪುಟಗಳು – ಸಂ.ಕೆ.ಸಿ.ಶಿವಾರೆಡ್ಡಿ.
4. ಕುವೆಂಪು ನಾಟಕಗಳ ಅಧ್ಯಯನ, ನರಹಳ್ಳಿ ಬಾಲಸುಬ್ರಹ್ಮಣ್ಯ, ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು–2016
5. ಕುವೆಂಪು ಸಾಹಿತ್ಯ ಸಂವಾದ, ಸಿ.ಪಿ.ಕೆ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ,
6. ಮೈಸೂರು–2012